<u>ದಿನಾಂಕ 06-01-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲು : ಎದುರುದಾರ ಪರ ಶ್ರೀ. ಆರ್ ಪಿ ಎ ವಕೀಲರಿಂದ:</u>

ನನ್ನ ಗಂಡನ ಹೆಸರು ಅಲ್ಲಾಭಕ್ಷ ಹೆಸರೂರು. ನನ್ನ ಮತ್ತು ಅವರ ಮದುವೆಯಾಗಿ 20 ವರ್ಷವಾಯಿತು, ಇಸವಿ ನನಗೆ ನೆನಪಿಲ್ಲ. ನನ್ನ ಗಂಡನ ಮೊದಲನೇ ಪತ್ನಿಯ ಹೆಸರು ಬಸೀರಾಬಿ ಎಂದರೆ ಸರಿ, ಅವರು ತೀರಿಕೊಂಡ ನಂತರ ನನ್ನನ್ನು ಮದುವೆಯಾಗಿದ್ದಾರೆ. ಬಸೀರಾಬಿರವರು 2011 ರಲ್ಲಿ ಅನಾರೋಗ್ಯದಿಂದ ತೀರಿಕೊಂಡಿದ್ದಾರೆ ಎಂದರೆ ಇಸವಿ ಗೊತ್ತಿಲ್ಲ, ಅನಾರೋಗ್ಯದಿಂದ ತೀರಿಕೊಂಡಿದ್ದಾರೆ. ಬಸೀರಾಬಿರವರಿಗೆ 5 ಜನ ಮಕ್ಕಳು ಇದ್ದರು. ಆ ಪೈಕಿ ಮೂರು ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಬಸೀರಾಬಿರವರ ಮೊದಲನೇ ಮಗಳಾದ ಶ್ರೀಮತಿ.ಸೊಗರಾಳವಳ ಮದುವೆಯನ್ನು 2008 ರಲ್ಲಿ ಹಾಗೂ ಇನ್ನೊಬ್ಬ ಮಗಳಾದ ಬಿಬಿಆಯೇಷಾರವರ ಮದುವೆ 2010 ರಲ್ಲಿ ಹಾಗೂ ಇನ್ನೊಬ್ಬ ಮಗಳಾದ ಖಾತುನಬಿಯ ಮದುವೆಯನ್ನು 2008 ರಲ್ಲಿ ಅವರ

ತಾಯಿ ಬಸೀರಾಬಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಇಬ್ಬರು ಹೆಣ್ಣು ಮಕ್ಕಳ ಮದುವೆಯನ್ನು ಮಾಡಿದ್ದೇನೆ. ನಂತರ ಇಬ್ಬರು ಗಂಡು ಮಕ್ಕಳ ಮದುವೆಯನ್ನು ನನ್ನ ಗಂಡ ಮಾಡಿದ್ದಾರೆ. ಬಸೀರಾಬಿ ಬದುಕಿದ್ದಾಗಲೇ ತನ್ನ ಹೆಣ್ಣು ಮಕ್ಕಳ ಮದುವೆಯನ್ನು ಮಾಡಿದ್ದರು ಎಂದರೆ ಒಬ್ಬ ಮಗಳ ಮದುವೆ ಮಾಡಿದ್ದರು. ಬಸೀರಾಬಿರವರು ಜೀವಂತ ಇದ್ದಾಗ ಅವರ ಮನೆತನದಲ್ಲಿ ಏನೆಲ್ಲ ಆಗಿದೆ ಎಂಬ ಬಗ್ಗೆ ನನಗೆ ಸಂಬಂಧ ಇಲ್ಲ ಎಂದರೆ ಸರಿ. ಬಸೀರಾಬಿ ತೀರಿಕೊಂಡ ನಂತರ ಗಂಡು ಮಕ್ಕಳಿದ್ದ ಕಾರಣ ನನ್ನನ್ನು ಮದುವೆಯಾಗುವುದು ಬೇಡ ಎಂದು ಅವರು ತಡೆದರು ಎಂದರೆ ಸರಿಯಲ್ಲ. **2011** ನೇ ಇಸವಿಯಲ್ಲಿ **1** ಮತ್ತು **2** ನೇ ಎದುರುದಾರರಿಗೆ **17, 18** ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಅಲ್ಲಾಭಕ್ಷರವರು ಮಕ್ಕಳನ್ನು ವಿರೋಧಿಸಿ ನನ್ನನ್ನು ಮದುವೆಯಾಗಿದ್ದರಿಂದ **1** ಮತ್ತು **2** ನೇ ಎದುರುದಾರರು ತಮ್ಮ ತಂದೆಯಿಂದ ಪ್ರತ್ಯೇಕವಾಗಿಯೇ ವಾಸ ಮಾಡುತ್ತಿದ್ದರು ಎಂದರೆ ಸರಿ.

**2.** ನಂತರ ನನ್ನ ಮತ್ತು ಅಲ್ಲಾಭಕ್ಷರವರ ಮಧ್ಯ ಸರಿಯಾಗಿ ಹೊಂದಾಣಿಕೆಯಾಗದೇ ಇದ್ದ ಕಾರಣ ನಾನು ಅಲ್ಲಾಭಕ್ಷರವರ ವಿರುದ್ಧ ಕ್ರಿ ಮಿ ನಂ. **2/2017** ನ್ನು ಜೀವನಾಂಶ ಕೋರಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಅಲ್ಲಾಭಕ್ಷರವರು ನನಗೆ ತಿಂಗಳಿಗೆ ರೂ.**1500-00** ಕೊಡಬೇಕೆಂದು ಆದೇಶವಾಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆದ ಆದೇಶದ ಪ್ರಕಾರ ಜೀವನಾಂಶದ ವಸೂಲಾತಿ ಕೋರಿ ಪ್ರಕರಣ ದಾಖಲಿಸಿದ್ದೀರಾ ಎಂದರೆ ಇಲ್ಲ. **1** ಮತ್ತು **2** ನೇ ಎದುರುದಾರರು ನನಗೆ ಜನಿಸಿದ ಮಕ್ಕಳಲ್ಲ ಎಂದರೆ ಸರಿ. ಎದುರುದಾರರ ವಿರುದ್ಧ ಜೀವನಾಂಶ ಕೇಳುವ ಹಕ್ಕು ನನಗೆ ಇಲ್ಲದೇ ಇದ್ದರೂಸ ಹ ಆಸ್ತಿ ಕೊಟ್ಟಿಲ್ಲ ಎಂದು ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಏನೂ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಜೀವನಾಂಶದ ಆದೇಶದ ಪ್ರಕಾರ ಜೀವನಾಂಶ ಕೊಡದೇ ಇದ್ದ ಕಾರಣ ಅವರ ಜಮೀನಿನ ಮೇಲೆ ಬೋಜಾ ಕೂರಿಸಲು ತೊಂದರೆ ಇತ್ತೇ ಎಂದರೆ ಮಕ್ಕಳು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ನನ್ನ ಗಂಡನ ಹೆಸರಿಗೆ ಜಮೀನು ಮತ್ತು ಜಾಗ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ನನ್ನ ಗಂಡ ಈಗ ಹಾವೇರಿಯಲ್ಲಿ ವಾಸ ಇದ್ದಾನೆ. ಅಲ್ಲಾಭಕ್ಷರವರ ಆಸ್ತಿಯ ಮೇಲೆ ಅವರು ತೀರಿಕೊಂಡ ನಂತರ ಮಾತ್ರ ನನಗೆ ಹಕ್ಕು ಬರುತ್ತದೆ ಎಂದು ಹೇಳಿದ ಕಾರಣ ಈ ಹಿಂದೆ ಸಲ್ಲಿಸಿದ ಪ್ರಕರಣವನ್ನು ವಾಪಸ್ಸು ತೆಗೆದುಕೊಂಡೆ ಎಂದರೆ ಸರಿಯಲ್ಲ. ನನಗೆ ಅಲ್ಲಾಭಕ್ಷರವರೊಂದಿಗೆ ಮದುವೆಯಾಗುವ ಸಮಯದಲ್ಲಿ ಎದುರುದಾರರು ಸಮಾಜದಲ್ಲಿ ಹೇಗೆ ಇರಬೇಕು ಎಂದು ಗೊತ್ತಿದ್ದ ಕಾರಣವೇ ನಮ್ಮಿಂದ ಪ್ರತ್ಯೇಕವಾಗಿ ವಾಸ ಇದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ಅಲ್ಲಾಭಕ್ಷ ಮದುವೆಯಾದ ನಂತರ ಎದುರುದಾರರು ನಮ್ಮಿಂದ ಪ್ರತ್ಯೇಕವಾಗಿಯೇ ಇದ್ದರು ಎಂದರೆ ಸರಿಯಲ್ಲ. ನಾವೆಲ್ಲರೂ ಕೂಡಿಯೇ ಇದ್ದೇವು. ನಾವು ಕೂಡಿ ಇದ್ದೇವು ಮತ್ತು ನಾನು ಎದುರುದಾರರನ್ನು ಸಾಕಿ ಸಲುಹಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಎದುರುದಾರರು ಯಾವುದೇ ರೀತಿಯಲ್ಲಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎದುರುದಾರರು ನನಗೆ ಜೀವನಾಂಶ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನನ್ನು ಸಾಕಿ ಸಲುಹಬೇಕಾದವರು ನನ್ನ ಗಂಡನೇ ಹೊರತು ಎದುರುದಾರರಲ್ಲ ಎಂದರೆ ಸರಿಯಲ್ಲ.

**4.** ಮದುವೆಯಾದ ನಂತರ ನಾನು ಗಂಡ ಮತ್ತು ಎದುರುದಾರರನ್ನು ಸಾಕಿ ಸಲುಹಿ ಜೋಪಾನ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಅಲ್ಲಾಭಕ್ಷರವರು ತಮ್ಮನ್ನು ವಿರೋಧಿಸಿ ಮದುವೆಯಾಗಿದ್ದಾರೆ ಎಂಬ ಕಾರಣದಿಂದ ನಮ್ಮ ಮದುವೆಯಾದಾಗಿನಿಂದಲೂ ಪ್ರತ್ಯೇಕವಾಗಿ ಕೂಲಿ ನಾಲಿ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಈಗ ದುಡಿದು ಬಲಿಷ್ಟರಾಗಿರುವ ಕಾರಣ ಹೇಗಾದರೂ ಮಾಡಿ ಅವರ ಆಸ್ತಿಯನ್ನು ಹೊಡೆದು ಹಾಕಬೇಕೆಂದು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರರಿಂದ ತಿಂಗಳಿಗೆ ರೂ **.15,000-00** ಜೀವನಾಂಶ ಬೇಕೆಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ಮಕ್ಕಳು ಅಲ್ಲದೇ ಇರುವ ಕಾರಣ ನನ್ನನ್ನು ಸಾಕಿ ಸಲಹುವ ಜವಾಬ್ದಾರಿ ಅವರ ಮೇಲೆ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್